ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು).

ಅ) "ಹೌದು".

ಆ) ಇಲ್ಲ. ಸಾರಿಗೆಗಳನ್ನು ಸತತವಾಗಿ ಯಾವುದೇ ಮಾರ್ಗದಲ್ಲೂ ರದ್ದುಗೊಳಿಸಿರುವುದಿಲ್ಲ. ಸೇಡಂ ತಾಲ್ಲೂಕಿನಲ್ಲಿ ಪ್ರತಿ ದಿನ ೩೫ ಅನುಸೂಚಿಗಳಿಂದ ೧೧.೬೭೦ ಅನುಸೂಚಿ ಕಿ.ಮೀ. ಗಳು ಆಚರಣೆಯಾಗುತ್ತಿದೆ. ಅನರಲ್ಲಿ ಬೇರೆ ಬೇರೆ ಮಾರ್ಗಗಳಲ್ಲಿ ಬಸ್ ರಿಪೇರಿ, ಸಿಬ್ಬಂದಿ ಕೊರತೆ ಮತ್ತು ಕೆಟ್ಟ ರಸ್ತೆಗಳಿಂದಾಗಿ ೨೨೦೦ ಕಿ. ಮೀಟರ್‌ಗಳು ರದ್ದಾಗಿರುತ್ತದೆ.

ಇ) ಬಸ್ಸಿನ ಮೇಲೆ ಚಾವಣಿಯ ಮೇಲೆ ಪ್ರಯಾಣ ಮಾಡುವುದು ತುಂಬಾ ಅಪಾಯಕಾರಿ. ಈ ತಾಲ್ಲೂಕಿನಲ್ಲಿ ಸಾಕಷ್ಟು ಸಾರಿಗೆಗಳನ್ನು ಕೊಟ್ಟಿದ್ದರೂ ಸಹ ಕಾರಣಾಂತರದಿಂದ ಕೆಲವು ಟ್ರಿಪ್ಪುಗಳು ರದ್ದಾಗುತ್ತಿರುವುದರಿಂದ ಬಸ್ ಚಾವಣಿಯ ಮೇಲೆ ಜನದಟ್ಟಣಿಯ ಸಮಯದಲ್ಲಿ ಪ್ರಯಾಣಿಕರು ಬಸ್ಸಿನ ಚಾವಣಿಯ ಮೇಲೆ ಪ್ರಯಾಣ ಮಾಡುವುದು ಕಂಡುಬರುತ್ತದೆ. ಎಲ್ಲಾ ಸಾರಿಗೆಗಳನ್ನು ಕಾರ್ಯಚರಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಈ) ಹಾಲಿ ಆಚರಣೆಯಲ್ಲಿರುವ ಸಾರಿಗೆಗಳನ್ನು ಕ್ರಮಬದ್ಧವಾಗಿ ವೇಳಾ ಪಟ್ಟಿಯಂತೆ ಕಾರ್ಯಚರಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ಹೆಚ್ಚಿನ ಸಾರಿಗೆಗಳನ್ನು ಬೇಡಿಕೆ ಆಧಾರದ ಮೇಲೆ ಓಡಿಸಲಾಗುವುದು.

ಬೈಲ ಹೊಂಗಲ ಶ್ರೀಶೈಲ ಬಸ್ಸನ್ನು ಪ್ರಾರಂಭಿಸುವ ಬಗ್ಗೆ

೪೩೨ (೭೮೮) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಡಿಪೋದಿಂದ ಬೈಲಹೊಂಗಲ–ಶ್ರೀಶೈಲಕ್ಕೆ ಕೆ ಎಸ್ ಆರ್ ಟಿ ಸಿ ಬಸ್ಸನ್ನು (ಸಾರಿಗೆಯನ್ನು) ಪ್ರಾರಂಭಿಸಲು ಸರ್ಕಾರಕ್ಕೆ ಮನವಿಗಳು ಬಂದಿವೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರದವರು ಆ ಮಾರ್ಗದಲ್ಲಿ ಬಸ್ಸಿನ ಸಂಚಾರವನ್ನು ಪ್ರಾರಂಭಿಸಲು ಯಾವ ಕ್ರಮ ಕೈಗೊಂಡಿರುವರು, ಮತ್ತು ಯಾವ ದಿನಾಂಕದಿಂದ ಅದನ್ನು ಪ್ರಾರಂಭಿಸಲಾಗುವುದು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿಗಳು).—

ಅ) ಹೌದು.

ಆ) ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳ ಅಂತರ ರಾಜ್ಯ ಸಾರಿಗೆ ಒಪ್ಪಂದದಲ್ಲಿ ಬೈಲಹೊಂಗಲ - ಶ್ರೀಶೈಲ ಮಾರ್ಗವು ಸೇರಿಸಲ್ಪಟ್ಟಿದೆ. ಅಂತಿಮ ಒಪ್ಪಂದದ ಪ್ರಕಟಣೆಯಾದ ನಂತರ ಈ ಮಾರ್ಗದಲ್ಲಿ ಸಾರಿಗೆ ಸೇವೆಯನ್ನು ಪ್ರಾರಂಭಿಸಲಾಗುವುದು.

ಮಲಖೇಡ ಹಾಗೂ ಮುಂದೋಳ ಗ್ರಾಮಗಳಲ್ಲಿ ದರೋಡೆ ಕೋರರು ಹಾಗೂ ನಕ್ಸಲೇಟ್‌ಗಳ ಹಾವಳಿ

೪೩೩ (೭೪೫) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಮಲಖಿಡ ಗ್ರಾಮದಲ್ಲಿ ಪೋಲೀಸ್ ಠಾಣೆಯನ್ನು ಮಂಜೂರಿ ಮಾಡಿ ಪ್ರಾರಂಭ ಮಾಡಲು ಮಾನ್ಯ ಮುಖ್ಯ ಮಂತ್ರಿಗಳು ಆದೇಶ ನೀಡಿದ್ದು ನಿಜವೇ ?

ಆ) ಸೇಡಂ ತಾಲ್ಲೂಕು ಆಂಧ್ರ ಗಡಿ ಪ್ರಾಂತ್ಯದಲ್ಲಿದ್ದು ಮಲಖೆಡ ಸಮೀಪ ದರೋಡೆಕೋರರು ಬಸ್ ಲೂಟಿ ಮಾಡಿ ಮುಂದೋಳ್‌ನಲ್ಲಿ ಸಹ ಸುಮಾರು ೧ ತಿಂಗಳು ಹಿಂದೆ ದರೋಡೆಕೋರರ ಲೂಟಿ ಮಾಡಿದ್ದು ನಿಜವೇ ?

ಇ) ಅದಕ್ಕಾಗಿ ದೊಡ್ಡ ಗ್ರಾಮಗಳಾದ ಮಲಖೆಡ ಹಾಗೂ ಆಂಧ್ರ ಗಡಿ ಪ್ರಾಂತ್ಯದಲ್ಲಿರುವ ಮೇದಕ್ ಅಥವಾ ರಿಬ್ಬನ್‌ಪಲ್ಲಿ ಸಮೀಪ ಪೋಲೀಸ್ ಠಾಣೆಗಳನ್ನು ನಿರ್ಮಾಣ ಮಾಡಿ ಭಯದ ವಾತಾವರಣದಲ್ಲಿರುವ ಆ ಭಾಗದ ನಾಗರೀಕರಿಗೆ ಸರ್ಕಾರ ಯಾವಾಗ ಅನುಕೂಲ ಮಾಡಿಕೊಡುವುದು ?